

# ‘ಜನರ ನಿರೀಕ್ಷೆ ಹುಸಿಗೊಳಿಸಲಾರೆ’

**ಹರಿಪ್ರಿಯಾ ಜಾಗರೂಕರಾಗಿದ್ದಾರೆ. ತಮ್ಮ ಬಗ್ಗೆ ಜನರಲ್ಲಿ ಇರುವ ನಿರೀಕ್ಷೆಯನ್ನು ಹುಸಿಗೊಳಿಸುವಂಥ ಪಾತ್ರದಲ್ಲಿ ನಟಿಸಲಾರೆ ಎಂದು ಪಣತೊಟ್ಟಿದ್ದಾರೆ. ಹಾಗಾಗಿಯೇ ಕಥೆಯ ಆಯ್ಕೆಯಲ್ಲಿಯೂ ಅವರು ತುಂಬ ಚ್ಯೂಸಿಯಾಗಿದ್ದಾರೆ.**



**■ ಪದ್ಮನಾಭ ಭಟ್**

ಪರ್ಯಾಯ ಸಿನಿಮಾ ಮತ್ತು ಮುಖ್ಯವಾಹಿನಿ ಸಿನಿಮಾ ಎರಡೂ ದಾರಿಗಳಲ್ಲಿಯೂ ನಡೆಯುತ್ತಿರುವ ಕನ್ನಡದ ವಿರಳ ನಟಿಯರಲ್ಲಿ ಹರಿಪ್ರಿಯಾ ಒಬ್ಬರು. ಒಂದೆಡೆ ಅವರ ‘ಬೆಲ್ ಬಾಟಂ’ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಸಖತ್ ಸೌಂಡು ಮಾಡಿ ಎರಡನೇ ಭಾಗಕ್ಕೆ ಸಜ್ಜಾಗುತ್ತಿದ್ದರೆ, ‘ಅಮೃತಮತಿ’ ಸಿನಿಮಾ ದೇಶ, ವಿದೇಶಗಳ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಮೆಚ್ಚುಗೆ ಗಳಿಸುತ್ತಿದೆ.

‘ನೀರ್ ದೋಸೆ’ ಹರಿಪ್ರಿಯಾ ವೃತ್ತಿಜೀವನದಲ್ಲಿ ತಿರುವು ಕೊಟ್ಟ ಸಿನಿಮಾ. ಆ ಚಿತ್ರದ ನಿರ್ದೇಶಕ ವಿಜಯಪ್ರಸಾದ್ ಜೊತೆಯಲ್ಲಿಯೇ ಈಗ ‘ಪೆಟ್ರೊಮ್ಯಾಕ್ಸ್’ ಸಿನಿಮಾ ಕೂಡ ಮಾಡಿ ಮುಗಿಸಿದ್ದಾರೆ. ಚಿತ್ರದ ಚಿಕ್ಕಪುಟ್ಟ ಭಾಗಗಳ ಚಿತ್ರೀಕರಣವಷ್ಟೇ ಬಾಕಿ ಇವೆ. ಆದರೆ ನೀರ್ ದೋಸೆ ಸಿನಿಮಾಗಿಂತ ತುಂಬ ಭಿನ್ನವಾಗಿ ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಹಾಗೆಯೇ ಲಾಕ್‌ಡೌನ್‌ಗಿಂತಲೂ ಮೊದಲೇ ಹರಿಪ್ರಿಯಾ ‘ಹ್ಯಾಪಿ ಇನ್ನಿಂಗ್’ ಅಂತೊಂದು ಸಿನಿಮಾದಲ್ಲಿಯೂ ನಟಿಸಿದ್ದರು. ಆ ಚಿತ್ರವೂ ರೆಡಿಯಾಗಿದೆ. ‘ಬೆಲ್ ಬಾಟಂ 2’ ಚಿತ್ರದ ಸಿದ್ಧತೆ ಜೋರಾಗಿದೆ. ಇದರ ಜೊತೆಗೇ ಹರಿಪ್ರಿಯಾ ಇನ್ನೊಂದು ಸಿನಿಮಾಗೆ ಸಹಿ ಮಾಡಿದ್ದಾರೆ. ಆ ಸಿನಿಮಾ ತಮ್ಮ ವೃತ್ತಿಜೀವನದಲ್ಲಿ ಮತ್ತೊಂದು ಮೈಲಿಗಲ್ಲು ಆಗುತ್ತದೆ ಎಂಬ ನಂಬಿಕೆಯೂ ಅವರಿಗಿದೆ.

ಸಹಿ ಮಾಡಿರುವ ಹೊಸ ಸಿನಿಮಾದಲ್ಲಿ ಅವರು ಉಪೇಂದ್ರ ಅವರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ. ‘ಉಪ್ಪಿ ಅವರ ಜೊತೆಗೆ ಲೂನಾರ್ಸ್ ಜಾಹೀರಾತಿನಲ್ಲಿ ನಟಿಸಿದ್ದೆ. ಒಂದು ಸಿನಿಮಾದಲ್ಲಿ ಅವರ ಜೊತೆ ತೆರೆ ಹಂಚಿಕೊಳ್ಳಬೇಕು ಎಂಬ ಆಸೆ ಇತ್ತು. ಆ ಆಸೆ ಈ ಸಿನಿಮಾದ ಮೂಲಕ ನೆರವೇರುತ್ತಿದೆ’ ಎಂದು ಸಂಭ್ರಮದಿಂದ ಹೇಳಿಕೊಳ್ಳುತ್ತಾರೆ.

ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ಶಶಾಂಕ್. ‘ಮೊಗ್ಗಿನ ಮನಸು’, ‘ಕೃಷ್ಣನ್ ಲವ್ ಸ್ಟೋರಿ’, ’ಕೃಷ್ಣಲೀಲಾ’, ‘ತಾಯಿಗೆ ತಕ್ಕ ಮಗ’ದಂಥ ಸಿನಿಮಾಗಳನ್ನು ಕೊಟ್ಟಿರುವ ಶಶಾಂಕ್ ಜೊತೆಗೆ ಕೆಲಸ ಮಾಡುವುದರ ಕುರಿತೂ ಹರಿಪ್ರಿಯಾ ಸಾಕಷ್ಟು ಎಕ್ಸೈಟ್ ಆಗಿದ್ದಾರೆ. ‘ಶಶಾಂಕ್ ಎಂಥ ಪ್ರತಿಭಾವಂತ ನಟ ಎನ್ನುವುದು ಎಲ್ಲರಿಗೂ ತಿಳಿದೇ ಇದೆ. ಅವರ ಸಿನಿಮಾದಲ್ಲಿ ಹೆಣ್ಣುಮಕ್ಕಳಿಗೆ ಕೊಡುವ ಮಹತ್ವ ವಿಶೇಷವಾದದ್ದು. ಈ ಚಿತ್ರದಲ್ಲಿಯೂ ನನ್ನ ಪಾತ್ರಕ್ಕೆ ಅಷ್ಟೇ ಮಹತ್ವವಿದೆ. ಸುಶಿಕ್ಷಿತ ಮತ್ತು ತುಂಬ ಗಟ್ಟಿಯಾದ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ’ ಎಂದು ಹೇಳಿಕೊಳ್ಳುವ ಅವರು ಪಾತ್ರದ ಕುರಿತು ಹೆಚ್ಚಿನ ಸುಳಿವು ಬಿಟ್ಟುಕೊಡುವುದಿಲ್ಲ. ಏಪ್ರಿಲ್‌ನಲ್ಲಿ ಈ ಚಿತ್ರದ ಚಿತ್ರೀಕರಣ ಶುರುವಾಗಲಿದೆಯಂತೆ.

ಈ ನಡುವೆ ಹರಿಪ್ರಿಯಾ ಸಾಕಷ್ಟು ಕಥೆಗಳನ್ನು ಕೇಳುತ್ತಿದ್ದಾರೆ. ಆದರೆ ಒಪ್ಪಿಕೊಳ್ಳುತ್ತಿರುವುದು ಮಾತ್ರ ಕೆಲವೇ ಕೆಲವು. ‘ನನ್ನ ಹಿಂದಿನ ಸಿನಿಮಾಗಳ ಮೂಲಕ ವರ್ಸಟೈಲ್ ನಟಿ ಎಂದು ಗುರ್ತಿಸಿಕೊಂಡಿದ್ದೇನೆ. ಒಂದಕ್ಕಿಂತ ಒಂದು ಭಿನ್ನ ಮತ್ತು ಸವಾಲಿನ ಪಾತ್ರಗಳಲ್ಲಿಯೇ ನಟಿಸಿದ್ದೇನೆ. ಜನರು ನನ್ನ ಸಿನಿಮಾ ಎಂದರೆ ಕೆಲವು ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ಆ ನಿರೀಕ್ಷೆಗೆ ಧಕ್ಕೆ ಬರುವ ಪಾತ್ರಗಳಲ್ಲಿ ನಾನು ನಟಿಸಲಾರೆ. ಹಾಗಾಗಿ ಬಹಳ ಎಚ್ಚರಿಕೆಯಿಂದ ಪಾತ್ರ ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ’ ಎಂದು ಹೇಳುವ ಅವರು, ಈಗಾಗಲೇ ಎರಡು ಕಥೆಗಳಿಗೆ ಒಪ್ಪಿಗೆಯನ್ನೂ ಕೊಟ್ಟಿದ್ದಾರೆ.

ಚಿತ್ರ: ಆದರ್ಶ ರಾವ್

ಕಾಸ್ಟ್ಯೂಮ್: ಪ್ರಿಯಾಂಕಾ ಹರೀಶ್; ಮೇಕಪ್: ದಿಶಾ ಅಂಚಯ್ಯ